4.10 ಪಿಎಂ

ಅಧ್ಯಕ್ಷರು : ಮಲ್ಲಿಕಾರ್ಜುನ ಖರ್ಗೆಯವರೇ, ಶೂನ್ಯ ವೇಳೆ ನೋಟೀಸ್‌ಗಳು 20 ಇವೆ. ಮೆಡಿಕಲ್ ಎಜ್ಯುಕೇಷನ್ ಮಿನಿಸ್ಟರ್ ಕಡೆಯಿಂದ ಒಂದು ಸ್ಟೇಟ್‌ಮೆಂಟ್ ಆಗಬೇಕು. ಮಾನ್ಯ ನಾಣಯ್ಯನವರು ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಫೈನಾನ್‌ಷಿಯಲ್ ಬಿಸಿನೆಸ್ ಅಂದರೆ ಡಿಮ್ಯಾಂಡ್ಸ್ ಮೇಲೆ ಡಿಸ್‌ಕಷನ್ ಈವತ್ತೂ ಆಗುವುದಿಲ್ಲ. ಇದು ಮುಗಿಯುವ ಹೊತ್ತಿಗೆ ಸಮಯವಾಗುತ್ತದೆ. ಇವತ್ತು ಕಡೆ ದಿವಸ ನಾವು ಊರಿಗೆ ಹೋಗಬೇಕು ಬೇಗ ಸದನವನ್ನು ಮುಂದೂಡಿ ಎಂದು ಚೀಟಿಗಳು ಬರುತ್ತಾ ಇದೆ. ನಾವು ಫೈನಾನ್‌ಷಿಯಲ್ ಬಿಸಿನೆಸ್ ತೆಗೆದುಕೊಂಡರೆ ಕಷ್ಟವಾಗುತ್ತದೆ. ತಾವೆಲ್ಲರೂ ಒಪ್ಪಿಕೊಂಡರೆ ಶೂನ್ಯ ವೇಳೆ ನೋಟಿಸನ್ನು ಸಸ್ಪೆಂಡ್ ಮಾಡುತ್ತೇನೆ. Immediately I will take up discussion on demands. Don't you think that is more useful?

ಶ್ರೀ ವಾಟಾಳ್‌ನಾಗರಾಜ್ : ಶೂನ್ಯ ವೇಳೆ ಪ್ರಸ್ತಾಪ ಮಾಡುವುದಕ್ಕೆ ಒಂದೊಂದು ನಿಮಿಷ ಅವಕಾಶ ಮಾಡಿಕೊಡಿ. ಇದು ಬಹಳ ಪ್ರಾಮುಖವಾಗಿರುತ್ತದೆ. 25 ನಿಮಿಷದಲ್ಲಿ ಮುಗಿದು ಹೋಗುತ್ತದೆ.

ಅಧ್ಯಕ್ಷರು : ನನ್ನದೇನೂ ಅಭ್ಯಂತರವಿಲ್ಲ. ಏನು ಹೇಳುತ್ತಿದ್ದೇನೆಂದರೆ, ಈಗ ಇದನ್ನು ಮುಗಿಸಿ, 30 ದಿವಸದಿಂದ ಪೆಂಡಿಂಗ್ ಇದೆ, ಸರ್ಕಾರದಿಂದ ಅದಕ್ಕೆ ಉತ್ತರವನ್ನು ಕೊಡಿಸಬೇಕು. ಇವತ್ತು ನಾವು ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂಭಿಸಲೇಬೇಕು. ಇದಕ್ಕೆ ಎಲ್ಲರೂ ಒಪ್ಪಿದ್ದೀರಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಈ ದಿನ ಶೂನ್ಯ ವೇಳೆಗೆ ಅವಕಾಶ ಕೊಡಿ, ಬೇಡಿಕೆಗಳ ಮೇಲೆ ಚರ್ಚೆಗೂ ಅವಕಾಶ ಕೊಡಬೇಕು. 6ನೇ ತಾರೀಖು ಬೆಳಿಗ್ಗೆ ಪ್ರಶ್ನೋತ್ತರ ಮುಗಿಯುತ್ತಿದ್ದ ಹಾಗೆ ಮೆಡಿಕಲ್ ಎಜ್ಯುಕೇಷನ್ ಬಗ್ಗೆ ರಿಪ್ಲೈಯನ್ನು ತೆಗೆದುಕೊಳ್ಳಿ.

ಅಧ್ಯಕ್ಷರು : ರಿಪ್ಲೈ ಅಲ್ಲ, ಡಿಮ್ಯಾಂಡ್ಸ್ ಇನ್‌ಷಿಯೇಟ್ ಆಗಬೇಕಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ : ಮೆಡಿಕಲ್ ಎಜ್ಯುಕೇಷನ್ ಮೇಲೆ ರಿಪ್ಲೈ ತೆಗೆದುಕೊಳ್ಳಿ ಎಂದು ಹೇಳಿದ್ದು, 6ನೇ ತಾರೀಖು ಬೆಳಿಗ್ಗೆ ಪ್ರಶ್ನೋತ್ತರ ಮುಗಿಯುತ್ತಿದ್ದಂತೆ ತೆಗೆದುಕೊಳ್ಳಿ.

ಅಧ್ಯಕ್ಷರು : ಶೂನ್ಯ ವೇಳೆ ನೋಟಿಸ್ ಕೊಟ್ಟಿರುವವರಿಗೆ ಮತ್ತೊಮ್ಮೆ ತಮ್ಮ ಮಾರ್ಗದರ್ಶನಕ್ಕಾಗಿ ಹೇಳುತ್ತಿದ್ದೇನೆ. ಬಹಳ ಸಂಕ್ಷಿಪ್ತವಾಗಿ ಒಂದು ನಿಮಿಷದಲ್ಲಿ ತಾವು ಪ್ರಸ್ತಾವನೆ ಮಾಡಬೇಕು. ಉತ್ತರ ಕೊಡುವವರು ಸಹ ಸಂಕ್ಷಿಪ್ತವಾಗಿ ಕೊಡಬೇಕು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಕುಂದಾಪುರ ಕ್ಷೇತ್ರದಲ್ಲಿ ರೌಡಿಗಳ ಪಟ್ಟಿ ಕುರಿತು

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು